ಆರ್ ಡಬ್ಲ್ಯೂ -1

ಇಂದು ದಿ. 21-08-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನ್ಯಾಯಾಲಯಕ್ಕೆ ಕಂಪನಿಯವರು ನನಗೆ ಪ್ರಕರಣ ನಡೆಸಲು ನೀಡಿದ ಪರವಾನಿಗೆ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.1 ಎಂದು, ಅರ್ಜಿದಾರನು ಆತನ ಹೊಲದಲ್ಲಿ ಲೈನನ್ನು ಎಳೆಯಲು ಅನುಮತಿ ನೀಡಿದ ಕುರಿತಾಗಿ ಬರೆದುಕೊಟ್ಟಿರುವ ಅನುಮತಿ ಪತ್ರದ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.2 ಎಂದು, ಅರ್ಜಿದಾರರಿಗೆ ಈಗಾಗಲೇ ಹಣ ಸಂದಾಯ ಮಾಡಿದ ಕುರಿತಾಗಿ ಇರುವ ಓಚರಿನ ನೋಟರಿ ರಶೀದಿಯನ್ನು ಹಾಜರುಪಡಿಸಿದ್ದು, ನಿ.ಆರ್.3 ಎಂದು, ಪೀಲ್ಡ್ ರಿಪೋರ್ಟ್ ವರದಿ ಸಲ್ಲಿಸಿದ್ದು ಅದನ್ನು ನಿ.ಆರ್.4 ಎಂದು ಅರ್ಜಿದಾರರ ಪರ ವಕೀಲರ ತಕರಾರಿಗೊಳಪಟ್ಟು ಗುರುತಿಸಲಾಯಿತು. ನನ್ನ ಪ್ರಮಾಣ ಪತ್ರ ಹಾಗೂ ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕಾಗಿ ವಿನಂತಿಯಿರುತ್ತದೆ.

**ಪಾಟೀಸವಾಲುಃ - ಅರ್ಜಿದಾರರ ಪರ ವಕೀಲರಿಂದ.**

ನಿಆರ್.2 ಅನುಮತಿ ಪತ್ರದ ಮೂಲ ಪ್ರತಿ ಐಡಿಬಿಐ ಬ್ಯಾಂಕಿನಲ್ಲಿದೆ. 2017-18 ರಲ್ಲಿ ಸದರಿ ದಾಖಲೆಯನ್ನು ಬ್ಯಾಂಕಿನಲ್ಲಿ ಕಬ್ಬಾ ಮಾಡಲಾಗಿರುತ್ತದೆ. ನಿಆರ್.2 ಇದು ದಿ.20-07-2014 ರಂದು ನೋಟರೈಸಡ್ ಆಗಿರುತ್ತದೆ. ಮೂಲ ದಾಖಲಾತಿಯನ್ನು ಪರಿಶೀಲಿಸಿ. ಅಟೆಸ್ಟಡ್ ಮಾಡಲಾಗಿದೆ ಎಂದು ನಿಆರ್.2 ರಲ್ಲಿ ಮಾಡಲಾಗಿದೆ. ಮೂಲ ದಾಖಲಾತಿಯನ್ನು ಪರಿಶೀಲಿಸಿ, ನಂತರ ವಾಪಸ್ ಕೊಡಲಾಗಿದೆ ಎಂದು ಅದರಲ್ಲಿ ನಮೂದಿಸಲಾಗಿದೆ. ಮೂಲ ದಾಖಲಾತಿಯನ್ನು ತೋರಿಸದೇ ಟ್ರೂ ಕಾಪಿ ನೋಟರೈಸ್ ಮಾಡಿಸಿರುತ್ತೇವೆ ಎನ್ನುವುದು ಸರಿಯಲ್ಲ.

1 ನೇ ಪಾರ್ಟಿ ನಮ್ಮ ಕಂಪನಿಯ ಹೆಸರು, 2 ನೇ ಪಾರ್ಟಿದಾರರ ಹೆಸರು ನಿಆರ್.2 ರಲ್ಲಿ ನಮೂದು ಮಾಡಿರುವುದಿಲ್ಲ. ನಿಆರ್.2 ರ ಪುಟ 2 ರಲ್ಲಿ 1 ನೇ ಪಾರ್ಟಿ ಅಂತಾ ಬರೆದಿದ್ದು, ಅದರ ಮುಂದೆ ಆ ಪಾರ್ಟಿಯ ಸಹಿ ಇರುವುದಿಲ್ಲ. 2014 ರಲ್ಲಿ ನಿಆರ್.2 ರಲ್ಲಿ ಇರುವ ವಿಷಯವನ್ನು ಬರೆಯಲಾಗಿದೆ.

ನಮ್ಮ ಕಂಪನಿಯಿಂದ ಯಾವುದೇ ರೀತಿ ಹಣ ಕೊಡಬೇಕಿದ್ದರೆ ಚೆಕ್ಕಿನ ಮೂಲಕ ಕೊಡಬೇಕು ಎನ್ನುವುದು ನಿಜ. ಆದರೆ ಆ ಸಮಯದಲ್ಲಿ ಹಣ ಕೊಟ್ಟಿರುತ್ತಾರೆ. ರೂ.1,50,000/- ಅಂತಾ ನಿಆರ್.2

ರಲ್ಲಿ ಬರೆದಿದ್ದು, ಅದಕ್ಕೆ ಸ್ಟಾಂಪ್ ಡ್ಯೂಟಿ ಕಟ್ಟಿದ ಬಗ್ಗೆ ಅದರಲ್ಲಿ ನಮೂದು ಆಗಿಲ್ಲ. ನಿಆರ್.2 ಅನುಮತಿ ಪತ್ರ ಇದು ನೋಂದಣಿಯಾಗದ ದಾಖಲೆ, ನಿಆರ್.2 ದಲ್ಲಿ ಸಾಕ್ಷಿದಾರರ ಸಹಿ ಮಾತ್ರ ಇರುತ್ತದೆ. ಅವರ ಹೆಸರು, ವಿಳಾಸ ನಮೂದು ಮಾಡಿರುವುದಿಲ್ಲ. ಸರ್ಕಾರಕ್ಕೆ ಕಟ್ಟುವ ಸ್ಟ್ಯಾಂಪ್ ಡ್ಯೂಟಿ ಕಟ್ಟುವುದನ್ನು ತಪ್ಪಿಸುವ ಸಲುವಾಗಿ, ಅನುಮತಿ ಪತ್ರ ಬರೆದುಕೊಂಡಿದ್ದೇವೆ ಎನ್ನುವುದು ಸುಳ್ಳು.

ನಿಆರ್.3 ವೋಚರ್ ನಲ್ಲಿರುವ ವಿಷಯಗಳನ್ನು ನಾವೇ ತುಂಬಿಕೊಂಡಿರುತ್ತೇವೆ ಎನ್ನುವುದು ಸುಳ್ಳು. ಐದು ಗುಂಟೆ ಹೇಗೆ ಬರುತ್ತದೆ ಅಂತಾ ಲೆಕ್ಕ ಮಾಡಿ ಹೇಳಿ ಎಂದು ಕೇಳಿದಾಗ ಸಾಕ್ಷಿ ನನಗೆ ಲೆಕ್ಕ ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನಾನು ನಮ್ಮ ವಕೀಲರ ಮೂಲಕ ತಿಳಿದುಕೊಂಡಿದ್ದೇನೆ. ಲೈನ್ ಹಾಕುವ ಪೂರ್ವದಲ್ಲಿ ಸರ್ವೆ ಮಾಡುತ್ತೇವೆ. 2014-15 ರಲ್ಲಿ ಸರ್ವೆ ಮಾಡಿರುತ್ತೇವೆ. ನಂತರ ನಾವು ಲೈನನ್ನು ಎಳೆಯಲು ಪ್ರಾರಂಭಿಸುತ್ತೇವೆ. ಗೌರಿಪುರದಿಂದ ಹರಿಹರ ತಾಲ್ಲೂಕಿನ ಗುತ್ತುರು ಗ್ರಾಮ ಸುಮಾರು 65 ರಿಂದ 70 ಕಿಮೀ ಉದ್ದ ಲೈನ್ ಎಳೆಯಲಾಗಿದೆ. ಯಾವುದೇ ಸಮಸ್ಯೆ ಇಲ್ಲದೇಯಿದ್ದಾಗ ಸದರಿ ಏರಿಯಾಕ್ಕೆ ಲೈನ್ ಎಳೆಯಲು ಸುಮಾರು ಒಂದುವರೆ ವರ್ಷ ಬೇಕಾಗುತ್ತದೆ. 2014-15 ರಲ್ಲಿ ಪ್ರಾರಂಭವಾಗಿ 2016-17 ರಲ್ಲಿ ಮುಕ್ತಾಯವಾಗುವ ಸಾಧ್ಯತೆ ಇರುತ್ತದೆ.

ನಿಆರ್.4 ರಲ್ಲಿ ಜಮೀನಿನ ಮಾಲೀಕರ ರುಜುವನ್ನು ಪಡೆದುಕೊಂಡಿಲ್ಲ. ರೈತರ ಸಮ್ಮುಖದಲ್ಲಿ ಸದರಿ ವರದಿಯನ್ನು ತಯಾರು ಮಾಡಿಲ್ಲದಿರುವುದರಿಂದ ರೈತರ ಸಹಿ ಪಡೆದಿಲ್ಲ ಎನ್ನುವುದು ಸುಳ್ಳು. ಆಯಾ ಏರಿಯಾದ ಹೋಬಳಿಯ ಸರ್ವೆ ಅಧಿಕಾರಿಯನ್ನು ನಾವು ಸರ್ವೆ ಮಾಡಿಸಲು ಕರೆಸುತ್ತೇವೆ. ಸರ್ವೆ ಮಾಡಿದ ನಂತರ ಅದರ ನಕ್ಷೆ ತಯಾರು ಮಾಡುವುದಿಲ್ಲ. ಮಾಲೀಕರ ಎಷ್ಟು ಜಾಗ ವನ್ನು ನಾವು ಅತಿಕ್ರಮಣ ಮಾಡಿಕೊಳ್ಳುತ್ತೇವೆ ಎನ್ನುವ ಬಗ್ಗೆ ತಿಳಿದುಕೊಳ್ಳಲು ನಾವು ಸರ್ವೆ ಮಾಡಿಸುತ್ತೇವೆ. ನಮ್ಮ ಇಲಾಖೆಯಲ್ಲಿ ಇಂಜಿನಿಯರ್ ಇರುತ್ತಾರೆ.

ಲೈನ್ ಎಳೆಯಲು "ಎಲೆಕ್ಟಿಕಲ್ ಇನ್ಸಪೆಕ್ಟರ್ " ರವರಿಂದ ಅನುಮತಿ ಪಡೆಯಬೇಕು ಎನ್ನುವುದು ನಿಜ. ಅದೇ ಪ್ರಕಾರ ಕೆ ಪಿ ಟಿ ಸಿ ಎಲ್, ದಾವಣಗೆರೆ ಇವರಿಂದ ಸಹ ಅನುಮತಿ ಪಡೆಯಬೇಕಾಗುತ್ತದೆ. ಮುಖ್ಯ ಇಂಜಿನಿಯರ್ ಬೆಂಗಳೂರು ಇವರ ಕಡೆಯಿಂದ ಸಹ ಅನುಮತಿ ಪಡೆಯಬೇಕು ಎನ್ನುವುದು ನಿಜ.

ಬೆಂಗಳೂರಿನ ಇಂಜಿನಿಯರ್ ಹಾಗೂ ದಾವಣಗೆರೆ ಕೆ.ಪಿ.ಟಿ.ಸಿ.ಎಲ್ ಇವರು ಮಿನಿಸ್ಟ್ರಿ ಆಫ್ ಗೈಡ್ ಲೈನ್ಸ ಪ್ರಕಾರ ಕೆಲಸ ಮಾಡಬೇಕಾಗುತ್ತದೆ ಎನ್ನುವುದು ನಿಜ. ಮಿಸ್ ನಂ.82-2018 ರಲ್ಲಿ ಹಾಜರುಪಡಿಸಿದ ನಿ.ಪಿ.6 ಗೈಡ್ಲೈನ್ಸನ್ನು ಸಾಕ್ಷಿಗೆ ತೋರಿಸಲಾಗಿದ್ದು, ಅದನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಅವರು ಸಲ್ಲಿಸಿದ ವಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪಡೆದುಕೊಂಡ ಮಾಹಿತಿಯನ್ನು ತೇರಿಸಿ ಸದರಿ

ಮಾಹಿತಿಯ ಪ್ರಕಾರ 220 ಕೆವಿ ಲೈನನ್ನು ಎಳೆಯುವಾಗ 35 ಮೀಟರ್ ಅಗಲದ ವ್ಯಾಪ್ತಿಯಲ್ಲಿ ಲೈನನ್ನು ಎಳೆಯಬೇಕು ಎನ್ನುವ ಮಾಹಿತಿ ಇರುತ್ತದೆ ಎಂದು ತೋರಿಸಲಾಗಿದ್ದು, ಸಾಕ್ಷಿಯು ಅದರ ಕುರಿತು ತನಗೆ ಈಗ ಯಾವುದೇ ಮಾಹಿತಿ ಇಲ್ಲ, ಸದರಿ ಮಾಹಿತಿಯನ್ನು ನಾವು ಸದರಿ ಅರ್ಜಿದಾರರ ಜಮೀನಿನಲ್ಲಿ ಲೈನನ್ನು ಎಳೆಯುವಾಗ ಇತ್ತೊ ಇಲ್ಲವೋ ಎನ್ನುವ ಕುರಿತು ತನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ನಿಪಿ.6 ರ ಕೊನೆಯ ಪುಟದಲ್ಲಿ 220 ಕೆ ವಿ ವಿದ್ಯುತ್ ಲೈನ್ ಗೆ ಅಗಲ 35 ಮೀಟರ್ ಅಂತಾ ನಮೂದು ಆಗಿರುತ್ತದೆ ಎನ್ನುವುದು ನಿಜ. ಟಾವರ್ ನಲ್ಲಿ ಒಟ್ಟು ಎ, ಬಿ, ಸಿ, ಡಿ, ಅಂತಾ ನಾಲ್ಕು ಟಾವರ್ ಗಳು ಇದ್ದು, ಅವುಗಳಲ್ಲಿ ಅರ್ಜಿದಾರರ ಜಮೀನಿನಲ್ಲಿ ಯಾವ ಟಾವರ್ ಅಳವಡಿಸಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ಒಂದು ಟವರ್ ಇದ್ದು, ಆ ಕುರಿತಾಗಿ ಪರಿಹಾರ ನೀಡಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಜಮೀನಿನಲ್ಲಿ ಒಂದು ಟವರ್ ಇದ್ದು ನಾವು ಸದರಿ ಟವರ್ ಗೆ ಯಾವುದೇ ಪರಿಹಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಕಾನೂನಿನಲ್ಲಿ ನಿಗಧಿಪಡಿಸಿದಂತೆ ಟವರ್ ಗೆ ನೀಡಬೇಕಾದ ಪರಿಹಾರ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಆರ್.4 ನಮ್ಮ ಕಛೇರಿಯಲ್ಲಿ ಕುಳಿತು ತಯಾರು ಮಾಡಿರುತ್ತೇವೆ ಎನ್ನುವುದು ಸರಿಯಲ್ಲ. ಲೈನ್ ಕಮಿಶನ್ ಚಾರ್ಜ ಆದ ದಿನಾಂಕ ನಿಆರ್.4 ರಲ್ಲಿ ನಮೂದು ಮಾಡಿಲ್ಲ. ಚಾರ್ ಆಗಿದ್ದರ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ನಾವು ಹಾಕಿದ ದಾಖಲೆಗಳಲ್ಲಿ ನಿಆರ್.2 ಅನುಮತಿ ಪತ್ರದಲ್ಲಿ ಭೂಮಿಯ ಅಪಮೌಲ್ಯ ಅಂತ ನಮೂದು ಮಾಡಿಲ್ಲ. ಅದೇ ಪ್ರಕಾರ ಟಾವರ್ ಗೆ ಸಂಬಧಪಟ್ಟಂತೆ ಸಹ ನಮೂದು ಆಗಿಲ್ಲ.

ನಮ್ಮ ಮತ್ತು ಮಾಲೀಕರ ಮಧ್ಯ ಮೊದಲೇ ಒಡಂಬಡಿಕೆಯಾಗಿದ್ದರಿಂದ ಸದರಿ ನಿ.ಆರ್ 2 ರಲ್ಲಿ ಟಾವರ್ ಬಗ್ಗೆ ನಮೂದು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಭೂ ಅಪಮೌಲ್ಯಕ್ಕೆ ಮತ್ತು ಯಾವ ಟಾವರ್ ಗೆ ಸಂಬಂಧಪಟ್ಟಂತೆ ಪರಿಹಾರ ನೀಡಲಾಗಿದೆ ಎಂದು ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ.

ಈಗ ಒಂದು ಎಕರೆ ಜಮೀನಿಗೆ 20 ರಿಂದ 25 ಲಕ್ಷ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಂಬ ಅಳವಡಿಸಿದಾಗ ಅದಕ್ಕೆ ಅಪಾಯದ ಲೈಟ್ ಅಳವಡಿಸಿರುತ್ತೇವೆ. ಒಳಗಡೆ ಯಾರೂ ಹೋಗಬಾರದು ಎಂದು ತಂತಿ ಸಹ ಅಳವಡಿಸಿರುತ್ತೇವೆ. ಟಾವರ್ ಒಳಗಡೆ ಇರುವ ಜಾಗ ರೈತರಿಗೆ ಉಪಯೋಗಕ್ಕೆ ಬರುವುದಿಲ್ಲ. ಸದರಿ ಟಾವರ್ ಅಳವಡಿಸಿದ ಜಾಗವನ್ನು ನಾವೇ ಸ್ವಾಧೀನಪಡಿಸಿಕೊಂಡಿರುತ್ತೇವೆ ಎನ್ನುವುದು ನಿಜ. ಕಾರಣ ಜೀವಕ್ಕೆ ಪಾಯ ಇರುವುದರಿಂದ ನಾವು ಸಾವಧೀನಪಡಿಸಿಕೊಂಡಿರುತ್ತೇವೆ. ಟೇಪ್ ಹಿಡಿದು ನಾವು ಅಳತೆ ಮಾಡಿರುತ್ತೇವೆ. ಸರ್ವೆ ಮಾಡುವ ಪೂರ್ವದಲ್ಲಿ ನಾವು ರೈತರಿಗೆ ಲಿಖಿತ ನೋಟೀಸು ಕೊಟ್ಟಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತೇವೆ.

ಮಾಲೀಕರ ಸಮುಖದಲ್ಲಿ ಸರ್ವೆ ಆಗಿರುತ್ತದೆ. ನಾವು ಹಾಜರುಪಡಿಸಿದ ದಾಖಲೆಗಳು ನಂಬತಕ್ಕ ದಾಖಲೆಗಳಲ್ಲ ಎನ್ನುವುದು ಸರಿಯಲ್ಲ.

ನಿಆರ್.2 ದಾಖಲೆಯಲ್ಲಿ ಶೀಲ್ ಇರುವುದಿಲ್ಲ. ನಮಗೆ ಅನುಕೂಲವಾಗುವ ರೀತಿಯಲ್ಲಿ ನಿಆರ್.2 ದಾಖಲೆಯನ್ನು ನಾವೇ ಸೃಷ್ಟನೆ ಮಾಡಿರುತ್ತೇವೆ ಎನ್ನುವುದು ಸುಳ್ಳು. ನಿಆರ್2 ರ ಮೂಲ ದಾಖಲೆ ಇಲ್ಲದಿದ್ದರೂ ಸಹ ಸದರಿ ದಾಖಲೆಯನ್ನು ನಾವೇ ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎನ್ನುವುದು ಸುಳ್ಳು. ಸದರಿ ದಾಖಲೆಯನ್ನು ನಮ್ಮ ಕಛೇರಿಯಲ್ಲಿ ನಮಗೆ ಅನುಕೂಲವಾಗುವ ರೀತಿಯಲ್ಲಿ ನಾವು ಸೃಷ್ಟಿಸಿರುತ್ತೇವೆ ಎನ್ನುವುದು ಸುಳ್ಳು.

ನಿ.ಆರ್.3 ವೋಚರ್ ಕೆಳಭಾಗ ಖಾಲಿ ಇದೆ, ತುಂಬಿರುವುದಿಲ್ಲ. ರೈತರಿಗೆ ರೂ.1,50,000/- ಕೊಡದಿದ್ದರೂ ಸಹ ಕೊಟ್ಟಿರುತ್ತೇವೆ ಎಂದು ನಾವೇ ನಿಆರ್.3 ರಲ್ಲಿ ಬರೆದುಕೊಂಡಿರುತ್ತೇವೆ ಎನ್ನುವುದು ಸುಳ್ಳು. ನಿಆರ್.3 ರಲ್ಲಿ ಬೆಳೆ ನಷ್ಟ ಪರಿಹಾರ ಅಂತಾ ನಮೂದು ಆಗಿರುತ್ತದೆ. ಲೈನ್ ಎಳೆಯುವ ಸಮಯದಲ್ಲಿ ಬೆಳೆ ಇದ್ದು, ಅದರ ನಷ್ಟ ಪರಿಹಾರ ಎಂದು ನಮೂದಾಗಿರುತ್ತದೆ. ರೈತರಿಗೆ ಕಡಿಮೆ ಪರಿಹಾರ ಕೊಡುವ ಸಲುವಾಗಿ ಯಾವುದೇಗೈಡ್ ಲೈನ್ನ ಅನುಸರಿಸದೇ 4.5 ಮೀಟರ್ ಅಗಲ ಅಂತಾ ನಿಆರ್.4 ವರದಿಯಲ್ಲಿ ಬರೆದುಕೊಂಡಿರುತ್ತೇವೆ ಎನ್ನುವುದು ಸರಿಯಲ್ಲ. ನಿಪಿ.6 ಮಿನಿಸ್ಟ್ರೀ ಗೈಡ್ ಲೈನ್ಸ್ ಉಲ್ಲಂಘನೆ ಮಾಡಿ, ನಿಅರ್.4 ರಲ್ಲಿ 4.5 ಮೀಟರ್ ಅಂತಾ ತಪ್ಪು ವರದಿ ನೀಡಿದ್ದೇವೆ ಎನ್ನುವುದು ಸರಿಯಲ್ಲ. ಲೈನ್ ಪರಿಶೀಲನೆ ಮಾಡುವ ಸಮಯದಲ್ಲಿ ಫೀಲ್ಡ ರಿಪೋರ್ಟ ಸಲ್ಲಿಸಿರುತ್ತಾರೆ. ಕೆ ಪಿ ಟಿ ಸಿ ಎಲ್ ನ ಎಕ್ಸಿಕ್ಯುಟಿವ್ ಇಂಜಿನಿಯರ್ ಬಂದು ಪರಿಶೀಲನೆ ಮಾಡಿರುತ್ತಾರೆ. ಫೀಲ್ಡ ವರದಿಯನ್ನು ಕೆ ಪಿ ಟಿ ಸಿ ಎಲ್ ಇವರಿಗೆ ಹಾಜರುಪಡಿಸಿದ ಬಗ್ಗೆ ದಾಖೆಲ ಹಾಜರುಪಡಿಸಲು ತೊಂದರೆ ಇಲ್ಲ, ಆದರೆ ಆ ದಾಖಲೆಗಳು ನಮ್ಮ ಬಳಿ ಇಲ್ಲ. ಕೆ ಪಿ ಟಿ ಸಿ ಎಲ್ ಇಂ ಜಿನಿಯರ್ ರವರ ಅನುಮತಿ ಪಡೆದು, ಪರಿಶೀಲನೆ ಮಾಡಿ, ಟಾವರ್ ಅಥವಾ ಸ್ವಾಧೀನ ಪಡಿಸಿಕೊಂಡ ಕ್ಷೇತ್ರದ ಬಗ್ಗೆನೋಡಿ ಫೀಲ್ಡ್ ವರದಿ ತಯಾರು ಮುಡಿರುತ್ತೇವೆ ಎನ್ನುವುದು ನಿಜ. ವಾಣಿಜ್ಯೋದ್ಯಮಕ್ಕಾಗಿ ಲೈನ್ ಎಳೆಯಲಾಗಿದೆ. ನಮ್ಮ " ನಂಪನಿ ಲಾಭಾಂಶ ಪಡೆಯುವ ಸಲುವಾಗಿಯೇ ಲೈನ್ ಎಳೆಯಲಾಗಿರುತ್ತದೆ ಎನ್ನುವುದು ಸುಳ್ಳು. ಕರೆಂಟ್ ಉತ್ಪಾದನೆ ಆಗಿದ್ದನ್ನು ನಾವು ಕೆ ಪಿ ಟಿ ಸಿ ಎಲ್ ಗೆ ಮಾರಾಟ ಮಾಡುತ್ತೇವೆ. ಎನ್ನುವುದು ನಿಜ. ಮಾರಾಟ ಮಾಡಿ ಬಂದ ಹಣ ಅದು ಲಾಭಾಂಶದ ಹಣ ಎನ್ನುವುದು

ಲೈನ್ ಕೆಳಗೆ ಯಾವುದೇ ಶಾಶ್ವತವಾದ ದೊಡ್ಡ ದೊಡ್ಡ ಮರ, ಅಡಿಕೆ, ತೆಂಗು ಬೆಳೆಯಲು ಬರುವುದಿಲ್ಲ ಎನ್ನುವುದು ನಿಜ. ಅದೇ ಪ್ರಕಾರ ಸದರಿ ಸ್ಥಳದಲ್ಲಿ ಕೋಳಿ ಫಾರ್ಮ್ ಮತ್ತು ಕಟ್ಟಡ ಕಟ್ಟಲು ಸಾಧ್ಯತೆ ಇಲ್ಲ ಎನ್ನುವುದು ನಿಜ. ಲೈನ್ ಎಳೆದ ನಂತರ ಆ ಸ್ಥಳದಲ್ಲಿ ಪದೇ ಪದೇ ಸರ್ವಿಸ್ ಮಾಡುತ್ತಿರುತ್ತೇವೆ ಎನ್ನುವುದು ನಿಜ. ಸಾಕ್ಷಿ ಅವಶ್ಯಕತೆ ಇದ್ದಾಗ ಮಾಡುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಸ್ಥಳದಲ್ಲಿ ಮನೆ ಕಟ್ಟಲು ಸಾಧ್ಯವಿಲ್ಲ. ಬೋರ್ ವೆಲ್ ತೆಗೆಯಲು ಸಾಧ್ಯವಿಲ್ಲ, ಆದ್ದರಿಂದ ಸದರಿ ಸ್ವತ್ತು

ಅಪಮೌಲ್ಯವಾಗುತ್ತದೆ ಎನ್ನುವುದು ಸರಿಯಲ್ಲ. ಈ ಎಲ್ಲಾ ಕಾರಣದಿಂದ ಅರ್ಜಿದಾರರಿಗೆ ಸರಿಯಾದ ಪರಿಹಾರ ಕೊ ಡಬೇಕಾಗುತ್ತದೆ ಎಂಬ ಕಾರಣದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಲೈನ್ ಎಳೆದಿರುವುದರಿಂದ ರೈತರ ಜಮೀನು ಅಪಮೌಲ್ಯವಾಗಿದ್ದು, ಈ ವಿಷಯ ನಮಗೆ ಗೊತ್ತಿದ್ದರೂ ಸಹ ಅವರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಅಪಮೌಲ್ಯವಾಗುವುದಿಲ್ಲ ಒಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾವು ಎಳೆದ ಲೈನ್ ಡಬಲ್ ಸರ್ಕುಟ್ ಲೈನ್ ಆಗಿರುತ್ತದೆ. ಈ ರೀತಿ ಲೈನ್ ಎಳೆದಿರುವುದರಿಂದ ರೈತರಿಗೆ ಅಪಾರ ನಷ್ಟ ಉಂಟಾಗಿ ಭೂಮಿಯ ಅಪಮೌಲ್ಯವಾಗಿದೆ ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ನಾವೇ ಪರಿಹಾರ ಕೊಡಬೇಕಾಗುತ್ತದೆ ಎನ್ನುವುದು ನಿಜ. ಆದರೆ ಈಗಾಗಲೇ ಪರಿಹಾರ ಕೊಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಅರ್ಜಿದಾರರಿಗೆ ಯಾವುದೇ ರೀತಿ ಪರಿಹಾರ ಕೊಡದಿದ್ದರೂ ಕೊಟ್ಟಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.08.22 10:34:44 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.